# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ವಿಜ್ಞಾನ ಭವನ, ನಂ. 24/2 ಮತ್ತು 24/3 (ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ), 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

**ದೂರವಾಣಿ/ಫ್ಯಾಕ್ಸ್ 080-26711160, ಮೊಬೈಲ್ : 9880405181, Email : ksta.gok@gmail.com**

---

## ಮಾಹಿತಿ ಹಕ್ಕು ಕಾಯಿದೆ 2005

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಕಾಯಿದೆಯ 2005 ಕಲಂ 4 (1) (ಎ)ಯ ಪ್ರಕಾರ ಸೂಚಿಪಟ್ಟಿಯನ್ನು ನಾಗರೀಕರಿಗೆ ನೀಡುವ ಸಲುವಾಗಿ ಪ್ರಕಟಿಸಲಾಗಿದೆ.

## ಸೂಚಿ ಪಟ್ಟಿ

1. ಅಕಾಡೆಮಿಯ ಸ್ಥಾಪನೆ – ಸರ್ಕಾರಿ ಆದೇಶ
2. ಅಕಾಡೆಮಿಯ ಸದಸ್ಯರ ನಾಮನಿರ್ದೇಶನ – ಸರ್ಕಾರಿ ಆದೇಶ
3. ಅಕಾಡೆಮಿಯ ಪುನರ್ ರಚನೆ – ಸರ್ಕಾರಿ ಆದೇಶ
4. ಅಕಾಡೆಮಿಯನ್ನು ಸ್ವಾಯತ್ತ ಸಂಸ್ಥೆಯಾಗಿ ನೊಂದಾವಣೆ – ನೊಂದಾವಣೆ ಪ್ರಮಾಣ ಪತ್ರ
5. ಅಧ್ಯಕ್ಷರು ಮತ್ತು ಸದಸ್ಯರ ವಿವರ
6. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರ
7. ಮಾಹಿತಿ ಹಕ್ಕು ಕಾಯಿದೆ 2005 ಕಂಡಿಕೆ 4(1) ಬಿ ಯಂತೆ ವಿವರಗಳು
8. ಅಕಾಡೆಮಿಯ ಕಛೇರಿ ವಿಳಾಸ, ದೂರವಾಣಿ, ಅಂತರ್ಜಾಲ, ಇ-ಮೇಲ್ ವಿವರಗಳು
9. ಕಾರ್ಯಕ್ರಮಗಳ ವಿವರ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ವಿಜ್ಞಾನ ಭವನ, ನಂ. 24/2 ಮತ್ತು 24/3 (ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ), 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070

**ದೂರವಾಣಿ/ಫ್ಯಾಕ್ಸ್ 080–26711160, ಮೊಬೈಲ್ : 9880405181, Email : ksta.gok@gmail.com**


## ಮಾಹಿತಿ ಹಕ್ಕು ಕಾಯಿದೆ 2005

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಕಾಯಿದೆಯ ಕಲಂ 4 (1) (ಬಿ)ಯ ಪ್ರಕಾರ ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಾಗರೀಕರಿಗೆ ನೀಡುವ ಸಲುವಾಗಿ ಪ್ರಕಟಿಸಲಾಗಿದೆ.

### 1. ಸಂಸ್ಥೆಯ ಕಾರ್ಯನಿರ್ವಹಣೆ ಮತ್ತು ಕರ್ತವ್ಯಗಳ ವಿವರ :

ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಮತ್ತು ಮುಂದುವರಿಸಲು ಹಾಗೂ ವಿಜ್ಞಾನವನ್ನು ಸಮಾಜದ ವಿವಿಧ ವರ್ಗಗಳ ಜನರಲ್ಲಿ ಜನಪ್ರಿಯಗೊಳಿಸಲು, ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ 2005ರ ಜುಲೈ 30 ರಂದು ರಾಜ್ಯ ಸರ್ಕಾರವು (ಸರ್ಕಾರಿ ಆದೇಶ ಸಂಖ್ಯೆ : ವಿಯಇ ವಿತ್ರಮ 2005ರ ಅನ್ವಯ) ಸ್ಥಾಪಿಸಿದೆ. ಅಕಾಡೆಮಿಯು 2005ರ ಸೆಪ್ಟಂಬರ್ 1 ರಂದು ವಿದ್ಯುಕ್ತವಾಗಿ ಉದ್ಘಾಟನೆಗೊಂಡು ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸೊಸೈಟಿಯನ್ನಾಗಿ ಕರ್ನಾಟಕ ನೋಂದಾವಣಿ ಅಧಿನಿಯಮ 1960ರ ಅನ್ವಯ 2009ರ ಏಪ್ರಿಲ್ 06 ರಂದು ನೋಂದಾಯಿಸಲಾಗಿದೆ.

ಅಕಾಡೆಮಿಯು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳು ಮತ್ತು ಅಭಿವೃದ್ಧಿಗಳನ್ನು ಸಾಮಾನ್ಯ ಜನರ ಜ್ಞಾನ ಪರಿಧಿಗೆ ನಿಲುಕುವಂತೆ ಮಾಡುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತಿದೆ. ಈ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳನ್ನು ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಪ್ರೊ.ಯು.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡು ಬರಲಾಗುತ್ತಿದೆ. ಹೆಸರಾಂತ ವಿಜ್ಞಾನಿಗಳು, ಹಿರಿಯ ಶಿಕ್ಷಣ ತಜ್ಞರು, ಸರ್ಕಾರದ ಕೆಲವು ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕೆಲವು ವೈಜ್ಞಾನಿಕ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ 18 ಮಹನೀಯರು ಅಕಾಡೆಮಿಯ ಸದಸ್ಯರಾಗಿರುವರು.

**ಅ) ಕೇಂದ್ರದ ಆಡಳಿತ ನಿರ್ವಹಣೆಯನ್ನು ಸಂಕ್ಷಿಪ್ತವಾಗಿ ಈ ಕೆಳಗೆ ನೀಡಲಾಗಿದೆ.**

ಸಂಘ – ನಿಯಮಾವಳಿಯಲ್ಲಿ ವಿವರಿಸಿರುವಂತೆ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರ ಸಭೆಗಳಲ್ಲಿ ತೆಗೆದು ಕೊಳ್ಳುವ ನಿರ್ಣಯಗಳಂತೆ ಆಡಳಿತ ನಿರ್ವಹಣೆಯನ್ನು ನಡೆಸಲಾಗುತ್ತದೆ. ಅಕಾಡೆಮಿಯ ದೈನಂದಿನ ಚಟುವಟಿಕೆಗಳನ್ನು ಸದಸ್ಯ ಕಾರ್ಯದರ್ಶಿಗಳ ಮಾರ್ಗದರ್ಶನದಂತೆ ನಡೆಸಲಾಗುತ್ತದೆ.

**ಆ) ಅಕಾಡೆಮಿಯ ಧ್ಯೇಯೋದ್ದೇಶಗಳು**

ಅಕಾಡೆಮಿಯ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ:

i. ವೈಜ್ಞಾನಿಕ ಮನೋಭಾನವನ್ನು ಸಮಾಜದ ವಿವಿಧ ವರ್ಗಗಳ ಜನರಲ್ಲಿ ಬೆಳೆಸುವುದು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳನ್ನು ವಿವಿಧ ಮಾಧ್ಯಮಗಳ ಮೂಲಕ ಪ್ರಸಾರ ಮಾಡುವುದು ಮತ್ತು ವಿಜ್ಞಾನ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದು.

ii. ಮೂಲ ವಿಜ್ಞಾನದ ಅಧ್ಯಯನಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು.

iii. ಯುವ ವಿಜ್ಞಾನಿಗಳು/ಸಂಶೋಧಕರಿಗೆ ಪ್ರೋತ್ಸಾಹ ನೀಡುವುದು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯ ತಂತ್ರಜ್ಞಾನ ಅಭಿವೃದ್ಧಿಗೆ ಉತ್ತೇಜನ ನೀಡುವುದು ಹಾಗೂ ಅವುಗಳ ಮಾರಾಟಕ್ಕೆ ಅನುವಾಗುವಂತೆ ಪ್ರಚಾರ ನೀಡುವುದು.

iv. ವೈಜ್ಞಾನಿಕ ಸಮ್ಮೇಳನ, ಕಾರ್ಯಾಗಾರ ಮತ್ತು ವಿಚಾರಗೋಷ್ಠಿಗಳನ್ನು ವಿವಿಧ ಇಲಾಖೆಯ ಅಧಿಕಾರಿಗಳು, ಅಧ್ಯಾಪಕರು/ಶಿಕ್ಷಕರು ಮತ್ತು ಜನಸಾಮಾನ್ಯರಿಗೆ ಆಯೋಜಿಸಿ ಚರ್ಚಿಸಲು ಹಾಗೂ ಸಂವಾದ ನಡೆಸಲು ಒಂದು ವೇದಿಕೆಯನ್ನು ಕಲ್ಪಿಸಿಕೊಡುವುದು.

v. ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಾದರಿಗಳು ಮತ್ತು ನಮೂನೆಗಳನ್ನು ತಮ್ಮ ಸೃಜನಾಶೀಲತೆಯಿಂದ ರಚಿಸಿ ಪ್ರದರ್ಶಿಸಲು ವಿಜ್ಞಾನ ವಸ್ತುಪ್ರದರ್ಶನ, ವಿಜ್ಞಾನ ಮೇಳ ಮುಂತಾದವುಗಳನ್ನು ಆಯೋಜಿಸುವುದು.

vi. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿರುವ ಅವಕಾಶಗಳ ಬಗ್ಗೆ ವಿಜ್ಞಾನ ಪದವೀಧರರು/ ಸ್ನಾತಕೋತ್ತರ ಪದವೀಧರರುಗಳಿಗೆ ಮಾಹಿತಿ ನೀಡುವ ಸಲುವಾಗಿ ಶಿಕ್ಷಣ ಸಂಸ್ಥೆಗಳು ಮತ್ತು ಉದ್ದಿಮೆಗಳ ನಡುವೆ ಅಂತರ ಸಂಪರ್ಕ ಏರ್ಪಡಿಸುವುದು.

vii. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಮತ್ತು ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಗುರುತಿಸಿ ಸನ್ಮಾನಿಸಲಾಗುವುದು.

viii. ಶಾಲೆಗಳಲ್ಲಿ ವಿಜ್ಞಾನ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಕಲಿಕೆಯ ಉತ್ಸಾಹವನ್ನು ಹೆಚ್ಚಿಸಿ ರೋಚಕ ವೈಜ್ಞಾನಿಕ ಪ್ರಪಂಚವನ್ನು ಅರಿಯಲು ಮತ್ತು ಶೋಧಿಸಲು ಉತ್ತೇಜಿಸುವುದು.

ix. ವೈಜ್ಞಾನಿಕ ಸಿದ್ಧಾಂತಗಳು ಮತ್ತು ಸೂತ್ರಗಳನ್ನು ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಅರ್ಥೈಸಿಕೊಳ್ಳಲು ಅನುವಾಗುವಂತೆ ವಿಜ್ಞಾನದ ಜ್ಞಾನಭಂಡಾರವನ್ನು ಕನ್ನಡದಲ್ಲಿ ಸೃಜಿಸುವುದು.

x. ಅಕಾಡೆಮಿಯ ಧ್ಯೇಯೋದ್ದೇಶಗಳಿಗನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುವಾಗುವಂತೆ ಅನುದಾನವನ್ನು ಸರ್ಕಾರದಿಂದ, ದಾನಿಗಳಿಂದ ಹಾಗೂ ವಿದೇಶ ಸಂಸ್ಥೆಗಳಿಂದ ಪಡೆಯುವುದು ಮತ್ತು ಸಮಾನ ಧ್ಯೇಯೋದ್ದೇಶಗಳನ್ನು ಹೊಂದಿದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳೊಡನೆ ಸಹಯೋಗ.

xi. ರಾಜ್ಯದ ದೀರ್ಘಾವಧಿ ಅಭಿವೃದ್ಧಿಗೆ ಅದರಲ್ಲೂ ಮುಖ್ಯವಾಗಿ ಕೃಷಿ, ಪರಿಸರ, ನೈಸರ್ಗಿಕ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕ್ಷೇತ್ರಗಳಿಗೆ ಉಪಯುಕ್ತವಾಗುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಆದ್ಯತಾ ವಲಯಗಳನ್ನು ಗುರುತಿಸುವುದು.

xii. ವಿಜ್ಞಾನ ಆಧಾರಿತ ಕ್ಷೇತ್ರದಲ್ಲಿ ಉದ್ಯಮ ಶೀಲತೆಯನ್ನು ಉತ್ತೇಜಿಸುವುದು ಹಾಗೂ ಯುವಕರು, ಮಹಿಳೆಯರು ಮತ್ತು ಗ್ರಾಮಾಂತರ ಜನರಲ್ಲಿ ಸ್ವಾವಲಂಬನಾ ಅಂತಃಪ್ರವೃತ್ತಿಯನ್ನು ಜಾಗೃತಗೊಳಿಸುವುದು.

xiii. ಮೂಲ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಶಾಲಾ ಶಿಕ್ಷಕರು ಹೆಚ್ಚಿನ ಜ್ಞಾನವನ್ನು ಪಡೆದು ತನ್ಮೂಲಕ ಬೋಧನಾ ಕೌಶಲ್ಯವನ್ನು ಉತ್ತಮ ಪಡಿಸಿಕೊಳ್ಳಲು ಅನುವಾಗುವಂತೆ

“ ತರಬೇತುದಾರರಿಗೆ ತರಬೇತಿ ಕಾರ್ಯಕ್ರಮ” ಮತ್ತು ಪುನಶ್ಚೇತನಾ ಕಾರ್ಯಕ್ರಮಗಳನ್ನು ಆಯೋಜಿಸುವುದು.

xiv. ಮೂಢನಂಬಿಕೆ/ಅಂಧ ಶ್ರದ್ದೆಗಳ ಬಗ್ಗೆ ಜನಜಾಗೃತಿ ಮೂಡಿಸುವುದು ಹಾಗೂ ಜ್ಞಾನಾಧಾರಿತ/ ಮಾಹಿತಿ ಸಮಾಜವನ್ನು ಕಟ್ಟುವ ಸಲುವಾಗಿ ವಿಜ್ಞಾನ ಸಾಕ್ಷರತೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.

xv. ವಿಜ್ಞಾನ ನಗರ ಹಾಗೂ ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಮಾರ್ಗದರ್ಶನ ನೀಡುವುದು ಮತ್ತು ಅವುಗಳ ಕಾರ್ಯಚಟುವಟಿಕೆಗಳಿಗೆ ಉತ್ತೇಜನ ನೀಡುವುದು.

**2. ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯ :**

ಅಕಾಡೆಮಿಯ ಆಡಳಿತ ಕಾರ್ಯಭಾರ ಮತ್ತು ಕಾರ್ಯಕ್ರಮಗಳ ಅನುಷ್ಠಾನವನ್ನು ಸರ್ವ ಸದಸ್ಯರ ಸಭೆ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯಗಳಂತೆ ಅಕಾಡೆಮಿಯ ಪದನಿಮಿತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಯಾಗಿರುವ ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರು ನಿರ್ವಹಿಸುವರು, ಆದಾಗ್ಯೂ ಕಾರ್ಯಕಾರಿ ಸಮಿತಿಯ ಮಾರ್ಗದರ್ಶನದಂತೆ ಆಡಳಿತ ನಿರ್ವಹಣೆಯನ್ನು ನಡೆಸಲಾಗುತ್ತಿದೆ.

ಆಡಳಿತಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಆಡಳಿತ ಮತ್ತು ಲೆಕ್ಕಪತ್ರ ನಿರ್ವಹಣೆಯಲ್ಲಿ ಹಾಗೂ ಹಿರಿಯ ವೈಜ್ಞಾನಿಕಾಧಿಕಾರಿ, ವೈಜ್ಞಾನಿಕಾಧಿಕಾರಿ ಮತ್ತು ಯೋಜನಾ ಸಂಯೋಜಕರು ಪ್ರಸ್ತಾವನೆ, ತಯಾರಿಸಿದ ಯೋಜನೆಗಳ ಅನುಷ್ಠಾನದ ಸಂಯೋಜನೆ, ಪರಿವೀಕ್ಷಣೆ ಮತ್ತು ವರದಿ ತಯಾರಿಕೆಯಲ್ಲಿ ಅಕಾಡೆಮಿಯ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳಿಗೆ ನೆರವು ನೀಡುತ್ತಿದ್ದಾರೆ.

**3. ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯವಿಧಾನ, ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ.**

ಆಡಳಿತ ಮತ್ತು ಹಣಕಾಸು ನಿರ್ವಹಣೆಯನ್ನು ಅಕಾಡೆಮಿ ಕಾರ್ಯಕಾರಿ ಸಮಿತಿಯ ನಿರ್ಣಯ ಹಾಗೂ ಮಾರ್ಗದರ್ಶನದಂತೆ ನಡೆಸಲಾಗುವುದು. ಆದಾಗ್ಯೂ, ಅಕಾಡೆಮಿಯ ದಿನನಿತ್ಯದ ಕಾರ್ಯಚಟುವಟಿಕೆಗಳ ಆಡಳಿತ ಮತ್ತು ಯೋಜನೆಯ ಅನುಷ್ಠಾನವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಗಳು ಸಂಘ ನಿಯಮಾವಳಿಯಲ್ಲಿ ವಿವರಿಸಿರುವ ನಿಬಂಧನೆಗಳಂತೆ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ನಿರ್ವಹಿಸುವರು.

**4. ಕರ್ತವ್ಯ ನಿರ್ವಹಣೆಗೆ ನಿಗದಿಪಡಿಸಿರುವ ನಿಯಮಗಳು :**

ನಿಯಮ ನಿಬಂಧನೆಗಳನ್ನು ಸಂಘ ನಿಯಮಾವಳಿಯಲ್ಲಿ ವಿವರಿಸಲಾಗಿದೆ ಹಾಗೂ ಕಾರ್ಯಕಾರಿ ಸಮಿತಿ ಮತ್ತು ಸರ್ವಸದಸ್ಯರ ಸಭೆಗಳ ನಿರ್ಣಯಗಳಂತೆ ಅಕಾಡೆಮಿಯಲ್ಲಿ ಕರ್ತವ್ಯ ನಿರ್ವಹಿಸಲಾಗುವುದು.

**5. ಕೇಂದ್ರದ ಸ್ವಾಧೀನದಲ್ಲಿರುವ ಮತ್ತು ಅದರ ಸಿಬ್ಬಂದಿಗಳು ಕರ್ತವ್ಯ ನಿರ್ವಹಣೆಯಲ್ಲಿ ಬಳಸುತ್ತಿರುವ ನಿಯಮ ನಿಬಂಧನೆ, ಆದೇಶಗಳು, ಕೈಪಿಡಿ ಮತ್ತು ದಾಖಲೆಗಳು :**

ಸಂಘ ನಿಯಮಾವಳಿ ಅಲ್ಲದೇ, ಪ್ರೊ.ಯು.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯುವ ಸರ್ವಸದಸ್ಯರ ಸಭೆಯಲ್ಲಿ ನಿಯಮ ನಿಬಂಧನೆಗಳನ್ನು ರಚಿಸಲಾಗುವುದು. ಸದರಿ ನಿಯಮ ನಿಬಂಧನೆಗಳಿಗೆ ತಿದ್ದುಪಡಿಯನ್ನು ಮಾಡುವ ಅವಶ್ಯಕತೆ ಇದ್ದರೆ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಿ, ಅನುಮೋದಿಸಲು ಅಥವಾ ದೃಢೀಕರಿಸಲು ಸರ್ವ ಸದಸ್ಯರ ಸಭೆಗೆ ಶಿಫಾರಸ್ಸು ಮಾಡಲಾಗುವುದು.

**6. ಕೇಂದ್ರದ ಸ್ವಾಧೀನಲ್ಲಿರುವ ವಿವಿಧ ರೀತಿಯ ದಾಖಲೆಗಳ ಬಗ್ಗೆ ವಿವರಣೆ :**

ಅಕಾಡೆಮಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದ ದಾಖಲೆಗಳಾದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಡತಗಳು, ನೇಮಕಾತಿ ಕಡತಗಳು, ಕಾರ್ಯಕಾರಿ ಸಮಿತಿಗಳ ಕಾರ್ಯಸೂಚಿ ಮತ್ತು ನಡವಳಿ, ಸರ್ಕಾರಿ ಆದೇಶಗಳು, ಸೂಚನೆಗಳು ಹಾಗೂ ಲೆಕ್ಕಪತ್ರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಛೇರಿಯಲ್ಲಿ ಸಂರಕ್ಷಿಸಿಡಲಾಗಿದೆ. ಅಲ್ಲದೇ, ಅಕಾಡೆಮಿಯು **"ವಿಜ್ಞಾನ ಲೋಕ"** ಎಂಬ ತ್ರೈಮಾಸಿಕ ಸಂಚಿಕೆಯನ್ನು ವಿಜ್ಞಾನವನ್ನು ಜನಪ್ರಿಯಗೂಳಿಸಲು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳು, ಪ್ರಗತಿ ಮತ್ತು ಉಪಯುಕ್ತತೆಗಳ ಬಗ್ಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಜನಸಾಮಾನ್ಯರಿಗೆ ಅರಿವು ಮೂಡಿಸುವ ಸದುದ್ದೇಶದಿಂದ ಪ್ರಕಟಿಸಲಾಗುತ್ತಿದೆ. ವಾರ್ಷಿಕ ನಾಲ್ಕು ಸಂಚಿಕೆಗಳನ್ನು ಅಂದರೆ, ಫೆಬ್ರವರಿ, ಮೇ, ಆಗಸ್ಟ್ ಮತ್ತು ನವೆಂಬರ್ ಮಾಹೆಗಳಲ್ಲಿ ಪ್ರಕಟಿಸಲಾಗುತ್ತಿದೆ. ಸದರಿ ತ್ರೈಮಾಸಿಕದ ಪ್ರತಿಗಳನ್ನು ರಾಜ್ಯದ ಎಲ್ಲಾ 202 ಶೈಕ್ಷಣಿಕ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ, ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ, ಗ್ರಂಥಾಲಯಗಳಿಗೆ ಮತ್ತು ಇನ್ನಿತರ ಸಂಸ್ಥೆಗಳಿಗೆ ವೈಜ್ಞಾನಿಕ ವಿಷಯಗಳ ಮಾಹಿತಿಯನ್ನು ನೀಡುವ ನಿಟ್ಟಿನಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ.

**7. ನೀತಿ, ನಿರೂಪಣೆ ಅಥವಾ ಕಾರ್ಯಕ್ರಮ ಅನುಷ್ಠಾನದಲ್ಲಿ ನಾಗರೀಕ ಪ್ರತಿನಿಧಿಗಳೊಡನೆ ಸಮಾಲೋಚಿಸುವ ಪ್ರತ್ಯೇಕ ವ್ಯವಸ್ಥೆ ಇದ್ದರೆ ವಿವರಿಸುವುದು.**

ನೀತಿ, ನಿರೂಪಣೆ ಅಥವಾ ಕಾರ್ಯಕ್ರಮ ಅನುಷ್ಠಾನದಲ್ಲಿ ನಾಗರೀಕ ಪ್ರತಿನಿಧಿಗಳೊಡನೆ ಸಮಾಲೋಚಿಸಿವ ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ. ಆದರೆ, ಕಛೇರಿಯ ವೇಳೆಯಲ್ಲಿ ಸದಸ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಸಲಹೆ ನೀಡಬಹುದು.

**8. ಕೇಂದ್ರದ ಅಂಗವಾಗಿ ಅಥವಾ ಸಲಹೆ ಸೂಚನೆಗಳನ್ನು ಪಡೆಯಲು ರಚಿತವಾದ ಎರಡು ಅಥವಾ ಹೆಚ್ಚಿನ ಸದಸ್ಯರನ್ನು ಹೊಂದಿರುವ ಮಂಡಳಿ, ಪರಿಷತ್, ಸಮಿತಿ ಮತ್ತು ಇತರೆ ಸಭೆಗಳ ವಿವರ ಹಾಗೂ ಅಂತಹ ಸಭೆಗಳು ಜನಸಾಮಾನ್ಯರಿಗೆ ಮುಕ್ತವಾಗಿದೆಯೆ ಅಥವಾ ಅವುಗಳ ಸಭೆಯ ನಿರ್ಣಯಗಳು ಜನಸಾಮಾನ್ಯರಿಗೆ ದೊರಕುವುದೇ ಎಂಬ ಬಗ್ಗೆ ವಿವರಣೆ.**

ಸರ್ವ ಸದಸ್ಯರ ಸಭೆಯ ಸದಸ್ಯರ ಪಟ್ಟಿಯನ್ನು **ಅನುಬಂಧ – 1** ರಲ್ಲಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿಯನ್ನು **ಅನುಬಂಧ – 2** ರಲ್ಲಿ ನೀಡಲಾಗಿದೆ. ಕಾರ್ಯಕಾರಿ ಸಮಿತಿ ಮತ್ತು ಸರ್ವಸದಸ್ಯರ ಸಭೆಯ ನಿರ್ಣಯಗಳನ್ನು ಸದಸ್ಯರುಗಳಿಗೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಕಳುಹಿಸಿ ಕೊಡಲಾಗುತ್ತಿದೆ. ಅಲ್ಲದೇ, ಕಾರ್ಯಕಾರಿ ಸಮಿತಿಯು ನಿರ್ದಿಷ್ಟ ಕಾರ್ಯಯೋಜನೆ ಅಥವಾ ವಿಷಯಗಳನ್ನು ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಶಿಫಾರಸ್ಸು ಮಾಡುವ ಸಲುವಾಗಿ ಉಪ ಸಮಿತಿಗಳನ್ನು ರಚಿಸುವುದು. ಅಕಾಡೆಮಿಯ ವಿವಿಧ ಸಮಿತಿಯ ಸಭೆಗಳು ಜನಸಾಮಾನ್ಯರಿಗೆ ಮುಕ್ತವಾಗಿರುವುದಿಲ್ಲ ಮತ್ತು ಸಭೆಯ ನಡವಳಿಗಳು ಅವರಿಗೆ ದೊರಕುವುದಿಲ್ಲ.

**9. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರ :**

ಅಕಾಡೆಮಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರಗಳನ್ನು **ಅನುಬಂಧ – 3** ರಲ್ಲಿ ನೀಡಲಾಗಿದೆ.

**10. ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿ ಪಡೆಯುತ್ತಿರುವ ಮಾಸಿಕ ವೇತನ ಹಾಗೂ ಅವರುಗಳಿಗೆ ನಿಯಮಾನುಸಾರ ನೀಡಬೇಕಾಗಿರುವ ಪರಿಹಾರಧನ ಇವುಗಳ ವಿವರ:**

ಅಕಾಡೆಮಿಯಲ್ಲಿ ಕಾರ್ಯನಿರ್ವಹಿಸಲು ಹಿರಿಯ ವೈಜ್ಞಾನಿಕಾಧಿಕಾರಿ, ವೈಜ್ಞಾನಿಕಾಧಿಕಾರಿ, ಯೋಜನಾ ಸಂಯೋಜಕರು, ಪ್ರಚಾರ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ, ಸಹಾಯಕ ಲೆಕ್ಕಾಧಿಕಾರಿ, ಆಪ್ತ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಮತ್ತು ದಲಾಯತ್ ಹುದ್ದೆಗಳಿಗೆ ಸಿಬ್ಬಂದಿಯನ್ನು

ನೇಮಿಸಿಕೊಳ್ಳಲಾಗಿದೆ. ಅವರ ಮಾಸಿಕ ವೇತನವನ್ನು ಸರ್ಕಾರದ ವೇತನ ಶ್ರೇಣಿಗನುಗುಣವಾಗಿ, ಈ ಉದ್ದೇಶಕ್ಕಾಗಿ ರಚಿಸಿದ ಒಂದು ಉಪ ಸಮಿತಿಯು ಶೈಕ್ಷಣಿಕ ವಿದ್ಯಾರ್ಹತೆ, ಹಿಂದಿನ ಅನುಭವ ಮತ್ತು ಸಂದರ್ಶನದಲ್ಲಿನ ನಿರ್ವಹಣೆ ಇವುಗಳ ಆಧಾರದ ಮೇಲೆ ನಿಗದಿಪಡಿಸಿದೆ. ಆನಂತರ ವಾರ್ಷಿಕ ಹೆಚ್ಚಳ ಮತ್ತು ಬಡ್ತಿಗಳನ್ನು ನೀಡಲು ಅಧಿಕಾರಿ/ಸಿಬ್ಬಂದಿಯ ಕಾರ್ಯನಿರ್ವಹಣೆ ಮತ್ತು ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು ಪರಿಗಣಿಸಲಾಗುವುದು. ನಿಯಮಾನುಸಾರ ಭವಿಷ್ಯನಿಧಿ ಮತ್ತು ಆರೋಗ್ಯವಿಮೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ವೇತನದ ವಿವರವನ್ನು **ಅನುಬಂಧ – 4 ರಲ್ಲಿ** ನೀಡಲಾಗಿದೆ.

**11. ಆಯವ್ಯಯದಲ್ಲಿ ತನ್ನ ಅಧೀನ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಅನುದಾನ, ಎಲ್ಲಾ ಯೋಜನೆಗಳ ವಿವರ, ಉದ್ದೇಶಿತ ಖರ್ಚುವೆಚ್ಚ ಮತ್ತು ಪಾವತಿಯ ವರದಿ**

ಅನ್ವಯಿಸುವುದಿಲ್ಲ

**12. ಸಹಾಯಾನುದಾನ ಯೋಜನೆ ಅನುಷ್ಠಾನ ಹಾಗೂ ಹಂಚಿಕೆ ಮಾಡಿದ ಹಣ ಮತ್ತು ಅಂತಹ ಯೋಜನೆಯ ಫಲಾನುಭವಿಗಳ ವಿವರ.**

ಅಕಾಡೆಮಿಯು ಮೂಲ ವಿಜ್ಞಾನ ಪದವಿಯ ವ್ಯಾಸಂಗಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ, ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಕನಿಷ್ಠಪಕ್ಷ ಶೇ. 70ಕ್ಕೂ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಬಿ.ಎಸ್.ಸಿ. ಪದವಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ (P.C.M.) ಅಥವಾ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ (C.B.Z.) ವಿಷಯಗಳನ್ನು ಆಯ್ಕೆ ಮಾಡಿಕೊಂಡು, ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅಂಕಗಳ ಆಧಾರದ ಮೇಲೆ ಮಾಹೆಯಾನ ರೂ. 500/–ರಂತೆ ಹತ್ತು ತಿಂಗಳ ಅವಧಿಯವರೆಗೆ ಶಿಷ್ಯವೇತನವನ್ನು (ಪ್ರತಿ ವಿಶ್ವವಿದ್ಯಾನಿಲಯಕ್ಕೆ 10 ಶಿಷ್ಯವೇತನದಂತೆ) ನೀಡಲಾಗುವುದು.

ಮೇಲ್ಕಂಡ ಶಿಷ್ಯವೇತನವನ್ನು, ಪ್ರಥಮ ವರ್ಷದಲ್ಲಿ ಶಿಷ್ಯವೇತನವನ್ನು ಪಡೆದು ಹಾಗೂ ಶೇ 60 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಎರಡನೇ ವರ್ಷಕ್ಕೆ ಅದೇ ಕಾಲೇಜಿನಲ್ಲಿ ಪ್ರವೇಶ ಪಡೆದರೆ ಸದರಿ ಶಿಷ್ಯವೇತನವನ್ನು ಮುಂದುವರೆಸಲಾಗುವುದು.

**13. ರಿಯಾಯಿತಿ ಸ್ವೀಕರಿಸಿದವರ ವಿವರ, ಪರ್ಮಿಟ್ ಅಥವಾ ಪ್ರಮಾಣೀಕರಣ ಮಂಜೂರು ಮಾಡಿರುವ ಬಗ್ಗೆ**

ಅನ್ವಯಿಸುವುದಿಲ್ಲ

**14. ಕೇಂದ್ರದಲ್ಲಿ ಲಭ್ಯವಿರುವ ಮಾಹಿತಿ ಮತ್ತು ವಿದ್ಯುನ್ಮಾನ ರೂಪದಲ್ಲಿರಿಸಿರುವ ಮಾಹಿತಿಯ ಬಗ್ಗೆ ವಿವರ.**

ಯೋಜನಾ ಪ್ರಸ್ತಾವನೆ, ಅನುಷ್ಠಾನಗೊಳಿಸಿದ ಯೋಜನೆಗಳ ವಿವರ, ವರದಿಗಳು ಮತ್ತು ಅಧಿಕೃತ ಪತ್ರ ವ್ಯವಹಾರಗಳ ವಿವರವನ್ನು ಗಣಕೀಕರಿಸಲಾಗಿದೆ. ಅಕಾಡೆಮಿಯು ಅನುಷ್ಠಾನಗೊಳಿಸಿರುವ ಪರಿಯೋಜನೆಗಳ ಸಮಗ್ರ ಮಾಹಿತಿಯನ್ನು ಅಂತರ್‌ಜಾಲದ http://www.kstacademy.org ತಾಣದಲ್ಲಿ ಮಾಹಿತಿಗಳನ್ನು ಸುಲಭವಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅಳವಡಿಸಲಾಗಿದೆ.

**15. ನಾಗರೀಕರಿಗೆ ಮಾಹಿತಿ ಪಡೆಯಲು ಲಭ್ಯ ವ್ಯವಸ್ಥೆಯ ವಿವರ ಹಾಗೂ ಗ್ರಂಥಾಲಯ ಮತ್ತು ವಾಚನಾಲಯ ವ್ಯವಸ್ಥೆಯು ಜನಸಾಮಾನ್ಯರಿಗೆ ಲಭ್ಯವಿದ್ದರೆ, ಅವುಗಳ ಕೆಲಸದ ವೇಳೆಯನ್ನು ನೀಡುವುದು.**

ಅಕಾಡೆಮಿಗೆ ಸಂಬಂಧಿಸಿದ ಮಾಹಿತಿಯನ್ನು ಕಛೇರಿಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಗಳಿಂದ ಕಛೇರಿ ವೇಳೆ ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ (ಪ್ರತಿ ತಿಂಗಳ

ಎರಡನೇ ಶನಿವಾರ ರಜಾ ದಿನವಾಗಿರುತ್ತದೆ) ಪಡೆಯಬಹುದು. ಅಕಾಡೆಮಿಯು ಗ್ರಂಥಾಲಯ ಮತ್ತು ವಾಚನಾಲಯ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ.

**16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು**

**ಮುಖ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ :**
**ಡಾ|| ಹೆಚ್. ಹೊನ್ನೇಗೌಡ,**
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ,**
**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ,**
**ವಿಜ್ಞಾನ ಭವನ, ನಂ 24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ,**
**ಬೆಂಗಳೂರು – 560 070. ದೂರವಾಣಿ : 080 – 26712789**
**ಇಮೇಲ್ : ksta.gok@ gmail.com**

**17. ನಿಗದಿ ಪಡಿಸಬಹುದಾದ ಇನ್ನಾವುದೇ ಮಾಹಿತಿಗಳನ್ನು ನಂತರದಲ್ಲಿ ಈ ಪ್ರಕಟಣೆಯನ್ನು ಆಗಿಂದಾಗ್ಗೆ ಆಧುನೀಕರಿಸಲಾಗುವುದು.**

**ಅನುಬಂಧ – 1**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸರ್ವಸದಸ್ಯರುಗಳ ಪಟ್ಟಿ

| ಕ್ರ.ಸಂ. | ಹೆಸರು ಮತ್ತು ವಿಳಾಸ | ಹುದ್ದೆ |
|---|---|---|
| 1 | ಪ್ರೊ. ಯು. ಆರ್. ರಾವ್<br>ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ<br>ಇಸ್ರೋ, ಅಂತರಿಕ್ಷ ಭವನ<br>ನ್ಯೂ ಬಿ. ಇ. ಎಲ್. ರಸ್ತೆ, ಬೆಂಗಳೂರು–560 094 | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ<br>ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ<br>6ನೇ ಮಹಡಿ, 5ನೇ ಹಂತ<br>ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001. | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಆರ್ಥಿಕ ಇಲಾಖೆ, 2ನೇ ಮಹಡಿ<br>ವಿಧಾನ ಸೌಧ, ಬೆಂಗಳೂರು–560 001. | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಉನ್ನತ ಶಿಕ್ಷಣ ಇಲಾಖೆ<br>ನಂ. 648, 6ನೇ ಮಹಡಿ, 2ನೇ ಹಂತ<br>ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಅರಣ್ಯ, ಭೂ ವಿಜ್ಞಾನ ಮತ್ತು ಪರಿಸರ ಇಲಾಖೆ<br>ನಂ. 448, 4ನೇ ಮಹಡಿ, 2ನೇ ಹಂತ<br>ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001. | ಸದಸ್ಯರು |

| | | |
|---|---|---|
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ<br>ನಂ. 315, 3ನೇ ಮಹಡಿ, 3ನೇ ಹಂತ<br>ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. | ಸದಸ್ಯರು |
| 7 | ಡಾ. ಬಿಸಲಯ್ಯ,<br>ವಿಶ್ರಾಂತ ಕುಲಪತಿಗಳು,<br>ನಂ. 629, 7ನೇ ಮೇನ್, 3ನೇ ಕ್ರಾಸ್<br>ಹೆಚ್. ಎಂ. ಟಿ. ಲೇಔಟ್, ಗಂಗಾನಗರ<br>ಬೆಂಗಳೂರು-560 032. | ಸದಸ್ಯರು |
| 8 | ಪ್ರೊ. ಎಂ. ಆರ್. ಗಜೇಂದ್ರಗಡ್<br>ವಿಶ್ರಾಂತ ಕುಲಪತಿಗಳು<br>ನಿಸರ್ಗ ಲೇಔಟ್, ಜಿಗಣಿ, ಆನೇಕಲ್ ತಾಲ್ಲೂಕು<br>ಬೆಂಗಳೂರು-562 106. | ಸದಸ್ಯರು |
| 9 | ಪ್ರೊ.ಆರ್. ದ್ವಾರಕೀನಾಥ್<br>ವಿಶ್ರಾಂತ ಕುಲಪತಿಗಳು ಮತ್ತು ಅಧ್ಯಕ್ಷರು<br>ಕೃಷಿ ಮಾನವ ಪರಿಸರ ಪ್ರತಿಷ್ಠಾನ<br>ನಂ.204, 100 ಅಡಿ ರಿಂಗ್ ರಸ್ತೆ, 3ನೇ ಘಟ್ಟ<br>ಬನಶಂಕರಿ 2ನೇ ಬ್ಲಾಕ್, 3ನೇ ಹಂತ<br>ಬೆಂಗಳೂರು-560085. | ಸದಸ್ಯರು |
| 10 | ಡಾ. ಪಿ. ಎಸ್. ಶಂಕರ್,<br>ಪ್ರೊಫೆಸರ್ ಆಫ್ ಮೆಡಿಸನ್<br>ದೀಪ್ತಿ ಜಿಲ್ಲಾಕೋರ್ಟ್ ಹಿಂಭಾಗ<br>ಗುಲ್ಬರ್ಗ | ಸದಸ್ಯರು |
| 11 | ಪ್ರೊ. ರಾಮಲಿಂಗಯ್ಯ<br>ನಿರ್ದೇಶಕರು, ಪಿ.ಇ.ಟಿ. ವಿದ್ಯಾಸಂಸ್ಥೆ<br>ಶನಿಕೃಪಾ, ಕೆ.ಟಿ. 501, 4ನೇ ಕ್ರಾಸ್, ಚಾಮುಂಡೇಶ್ವರಿ ನಗರ<br>ಮಂಡ್ಯ-571 401. | ಸದಸ್ಯರು |
| 12 | ಪ್ರೊ. ಜಯಗೋಪಾಲ್ ಉಚ್ಚಿಲ್<br>ಬಿ-1579, ಆಕಾಂಕ್ಷೆ<br>ಸಹಕಾರ ನಗರ, ಬೆಂಗಳೂರು-560 092. | ಸದಸ್ಯರು |
| 13 | ಶ್ರೀ ಟಿ.ವಿ. ಶ್ರೀನಾಥಶಾಸ್ತ್ರೀ,<br>ನಂ. 123/1, ಮೊದಲನೆಯ ಮಹಡಿ<br>ಶಿವಗೃಹ ಅಪಾರ್ಟ್‌ಮೆಂಟ್ಸ್, ನೇತಾಜಿ ರೋಡ್, 4ನೇ ಬ್ಲಾಕ್<br>ತ್ಯಾಗರಾಜ ನಗರ, ಬೆಂಗಳೂರು-560 028. | ಸದಸ್ಯರು |
| 14 | ಡಾ. ಕೆ. ಎನ್. ಶಂಕರ<br>ನಿವೃತ್ತ ನಿರ್ದೇಶಕರು, ಐ.ಎಸ್.ಎ.ಸಿ., ಇಸ್ರೋ<br>ಎಸ್ 3, ರಜತಾ ಮ್ಯಾನರ್, ಗಂಧರ್ವ ಬಾರ್ ಹತ್ತಿರ<br>ಸೌತ್ ಎಂಡ್ ಸರ್ಕಲ್, ಬೆಂಗಳೂರು. | ಸದಸ್ಯರು |
| 15 | ಪ್ರೊ. ಕೆ. ಮುನಿಯಪ್ಪ<br>ಜೀವರಸಾಯನಶಾಸ್ತ್ರ ವಿಭಾಗ<br>ಭಾರತೀಯ ವಿಜ್ಞಾನ ಸಂಸ್ಥೆ<br>ಬೆಂಗಳೂರು. | ಸದಸ್ಯರು |
| 16 | ಡಾ. ವಿ. ಪ್ರಕಾಶ್<br>ನಿರ್ದೇಶಕರು | ಸದಸ್ಯರು |

| | | |
|---|---|---|
| | ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್<br>ಮೈಸೂರು-570 020. | |
| 17 | ಪ್ರೊ. ಎಸ್. ವಿ. ಸಂಕನೂರ<br>ವಕೀಲ್ ಚಾಳ್<br>ಗದಗ. | ಸದಸ್ಯರು |
| 18 | ಡಾ. ಹೆಚ್. ಹೊನ್ನೇಗೌಡ<br>ನಿರ್ದೇಶಕರು (ತಾಂತ್ರಿಕ)<br>ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಭವನ, ನಂ. 24/2 ಮತ್ತು 24/3<br>21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ<br>ಬೆಂಗಳೂರು-560 070. | ಸದಸ್ಯ ಕಾರ್ಯದರ್ಶಿ |

**ಅನುಬಂಧ – 2**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರುಗಳ ಪಟ್ಟಿ

| ಕ್ರ.ಸಂ. | ಹೆಸರು ಮತ್ತು ವಿಳಾಸ | ಹುದ್ದೆ |
|---|---|---|
| 1 | ಪ್ರೊ. ಯು. ಆರ್. ರಾವ್<br>ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ<br>ಇಸ್ರೋ, ಅಂತರಿಕ್ಷ ಭವನ,<br>ನ್ಯೂ ಬಿ. ಇ. ಎಲ್. ರಸ್ತೆ, ಬೆಂಗಳೂರು-560 094. | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ<br>ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ<br>6ನೇ ಮಹಡಿ, 5ನೇ ಹಂತ<br>ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಆರ್ಥಿಕ ಇಲಾಖೆ, 2ನೇ ಮಹಡಿ<br>ವಿಧಾನ ಸೌಧ, ಬೆಂಗಳೂರು-560 001. | ಸದಸ್ಯರು |
| 4 | ಡಾ. ಬಿಸಲಯ್ಯ,<br>ವಿಶ್ರಾಂತ ಕುಲಪತಿಗಳು,<br>ನಂ. 629, 7ನೇ ಮೇನ್, 3ನೇ ಕ್ರಾಸ್<br>ಹೆಚ್. ಎಂ. ಟಿ. ಲೇಔಟ್, ಗಂಗಾನಗರ<br>ಬೆಂಗಳೂರು-560 032. | ಸದಸ್ಯರು |
| 5 | ಪ್ರೊ. ಎಂ. ಆರ್. ಗಜೇಂದ್ರಗಡ್<br>ವಿಶ್ರಾಂತ ಕುಲಪತಿಗಳು<br>ನಿಸರ್ಗ ಲೇಔಟ್, ಜಿಗಣಿ, ಆನೇಕಲ್ ತಾಲ್ಲೂಕು<br>ಬೆಂಗಳೂರು-562 106. | ಸದಸ್ಯರು |
| 6 | ಪ್ರೊ.ಆರ್. ದ್ವಾರಕೀನಾಥ್<br>ವಿಶ್ರಾಂತ ಕುಲಪತಿಗಳು ಮತ್ತು ಅಧ್ಯಕ್ಷರು<br>ಕೃಷಿ ಮಾನವ ಪರಿಸರ ಪ್ರತಿಷ್ಠಾನ | ಸದಸ್ಯರು |

| | | |
|---|---|---|
| | ನಂ.204, 100 ಅಡಿ ರಿಂಗ್ ರಸ್ತೆ, 3ನೇ ಘಟ್ಟ<br>ಬನಶಂಕರಿ 2ನೇ ಬ್ಲಾಕ್, 3ನೇ ಹಂತ<br>ಬೆಂಗಳೂರು–560085. | |
| 7 | ಡಾ. ಪಿ. ಎಸ್. ಶಂಕರ್,<br>ಪ್ರೊಫೆಸರ್ ಆಫ್ ಮೆಡಿಸನ್<br>ದೀಪ್ತಿ ಜಿಲ್ಲಾಕೋರ್ಟ್ ಹಿಂಭಾಗ<br>ಗುಲ್ಬರ್ಗ | ಸದಸ್ಯರು |
| 8 | ಪ್ರೊ. ರಾಮಲಿಂಗಯ್ಯ<br>ನಿರ್ದೇಶಕರು, ಪಿ.ಇ.ಟಿ. ವಿದ್ಯಾಸಂಸ್ಥೆ<br>ಶನಿಕೃಪಾ, ಕೆ.ಟಿ. 501, 4ನೇ ಕ್ರಾಸ್, ಚಾಮುಂಡೇಶ್ವರಿ ನಗರ<br>ಮಂಡ್ಯ–571 401. | ಸದಸ್ಯರು |
| 9 | ಪ್ರೊ. ಜಯಗೋಪಾಲ್ ಉಚ್ಚಿಲ್<br>ಬಿ–1579, ಆಕಾಂಕ್ಷೆ<br>ಸಹಕಾರ ನಗರ, ಬೆಂಗಳೂರು–560 092. | ಸದಸ್ಯರು |
| 10 | ಶ್ರೀ ಟಿ.ವಿ. ಶ್ರೀನಾಥಶಾಸ್ತ್ರೀ,<br>ನಂ. 123/1, ಮೊದಲನೆಯ ಮಹಡಿ<br>ಶಿವಗೃಹ ಅಪಾರ್ಟ್‌ಮೆಂಟ್ಸ್, ನೇತಾಜಿ ರೋಡ್, 4ನೇ ಬ್ಲಾಕ್<br>ತ್ಯಾಗರಾಜ ನಗರ, ಬೆಂಗಳೂರು–560 028. | ಸದಸ್ಯರು |
| 11 | ಡಾ. ಕೆ. ಎನ್. ಶಂಕರ<br>ನಿವೃತ್ತ ನಿರ್ದೇಶಕರು, ಐ.ಎಸ್.ಎ.ಸಿ., ಇಸ್ರೋ<br>ಎಸ್ 3, ರಜತಾ ಮ್ಯಾನರ್, ಗಂಧರ್ವ ಬಾರ್ ಹತ್ತಿರ<br>ಸೌತ್ ಎಂಡ್ ಸರ್ಕಲ್, ಬೆಂಗಳೂರು. | ಸದಸ್ಯರು |
| 12 | ಪ್ರೊ. ಕೆ. ಮುನಿಯಪ್ಪ<br>ಜೀವರಸಾಯನಶಾಸ್ತ್ರ ವಿಭಾಗ<br>ಭಾರತೀಯ ವಿಜ್ಞಾನ ಸಂಸ್ಥೆ<br>ಬೆಂಗಳೂರು. | ಸದಸ್ಯರು |
| 13 | ಡಾ. ವಿ. ಪ್ರಕಾಶ್<br>ನಿರ್ದೇಶಕರು<br>ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್<br>ಮೈಸೂರು–570 020. | ಸದಸ್ಯರು |
| 14 | ಪ್ರೊ. ಎಸ್. ವಿ. ಸಂಕನೂರ<br>ವಕೀಲ್ ಚಾಳ್<br>ಗದಗ. | ಸದಸ್ಯರು |
| 15 | ಡಾ. ಹೆಚ್. ಹೊನ್ನೇಗೌಡ<br>ನಿರ್ದೇಶಕರು (ತಾಂತ್ರಿಕ)<br>ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಭವನ, ನಂ. 24/2 ಮತ್ತು 24/3<br>21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ<br>ಬೆಂಗಳೂರು–560 070. | ಸದಸ್ಯ ಕಾರ್ಯದರ್ಶಿ |

**ಅನುಬಂಧ – ೩**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಿಬ್ಬಂದಿಗಳ ವಿವರ

1. ಡಾ. ಹೆಚ್. ಹೊನ್ನೇಗೌಡ
   ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ
   ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕ.ವಿ.ತಂ.ಅ.
   ಇಮೇಲ್ : ksta.gok@gmail.com , ದೂ : 080– 26712789

2. ಡಾ. ಎ.ಎಂ. ರಮೇಶ್
   ಹಿರಿಯ ವೈಜ್ಞಾನಿಕ ಅಧಿಕಾರಿ

3. ಡಾ. ಆರ್. ಆನಂದ್
   ವೈಜ್ಞಾನಿಕ ಅಧಿಕಾರಿ

4. ಶ್ರೀ ಮಹದೇವೇಗೌಡ
   ಸಾರ್ವಜನಿಕ ಸಂಪರ್ಕಾಧಿಕಾರಿ ಮತ್ತು ಆಡಳಿತಾಧಿಕಾರಿ.

5. ಕು. ಲೀಲು
   ಸದಸ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ

6. ಶ್ರೀ. ಚಂದ್ರಶೇಖರಮೂರ್ತಿ ಎಸ್.
   ದ್ವಿತೀಯ ದರ್ಜೆ ಸಹಾಯಕ

7. ಕು. ಶಾಲಿನಿ ಎಂ.
   ಸಹಾಯಕ ಆಡಳಿತಾಧಿಕಾರಿ

8. ಶ್ರೀ. ಹೆಚ್. ವಿ. ಹೊನ್ನೇಗೌಡ
   ಸಹಾಯಕ ಲೆಕ್ಕಾಧಿಕಾರಿ

9. ಶ್ರೀ. ಉಮೇಶ್ ಕೆ.ಸಿ.
   ದಲಾಯತ್

10. ಕು. ಅಶ್ವಿನಿ
    ಮೆಸೆಂಜರ್

**ಅನುಬಂಧ – 4**

## ಅಕಾಡೆಮಿಯ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿರುವ ಮಾಸಿಕ ವೇತನದ ವಿವರ.

| ಕ್ರ. ಸಂ. | ಪದನಾಮ | ವೇತನ ಶ್ರೇಣಿ |
|---|---|---|
| 1. | **ಹಿರಿಯ ವೈಜ್ಞಾನಿಕಾಧಿಕಾರಿ** | 20025-525-22650-600-26250-28275 |
| 2. | **ವೈಜ್ಞಾನಿಕಾಧಿಕಾರಿ** | 18150-450-19500-525-22650-600-26250-675-26925 |
| 4. | **ಸಾರ್ವಜನಿಕ ಸಂಪರ್ಕಾಧಿಕಾರಿ ಮತ್ತು ಆಡಳಿತಾಧಿಕಾರಿ** | 15200-400-16400-450-19500-525-22650-600-25650 |
| 6. | **ಆಪ್ತ ಕಾರ್ಯದರ್ಶಿ** | 8000-200-8600-225-9500-250-10500-300-12300-350-14400-400-14800 |
| 7. | **ಕಿರಿಯ ಸಹಾಯಕ** | 5800-100-6000-125-6500-150-7100-175-7800-200-8600-225-9500-250-10500 |
| 8. | **ದಲಾಯತ್** | 5200-100-6000-125-6500-150-7100-175-7800-200-8200 |
| 3. | **ಸಹಾಯಕ ಆಡಳಿತಾಧಿಕಾರಿ** | ಸಂಚಿತ ರೂ. 10,000/–ಮಾಹೆಯಾನ |
| 5. | **ಸಹಾಯಕ ಲೆಕ್ಕಾಧಿಕಾರಿ** | ಸಂಚಿತ ರೂ. 10,500/–ಮಾಹೆಯಾನ |
| 9. | **ಮೆಸೆಂಜರ್** | ಸಂಚಿತ ರೂ. 6,000/–ಮಾಹೆಯಾನ |

**ಭತ್ಯೆ ಮತ್ತಿತರ ಪಾವತಿಗಳು ಸರ್ಕಾರದ ನಿಯಮಾನುಸಾರ ಆಯಾ ಹುದ್ದೆಗಳಿಗೆ ಅನ್ವಯವಾಗುವಂತೆ ಇರುತ್ತವೆ.**